Indian Journal of History and Archaeology

ISSN (E):2582-225X
VOL-2, ISSUE -3,SEPTEMBER-OCTOBER, 2020, 53-60

# ಅಂಬೇಡ್ಕರ್ ಅವರ ಸಂಘಟನೆಗಳು ಮತ್ತು ರೂಪಿಸಿದ ಸಾಮಾಜಿಕ ಹೋರಾಟಗಳು

**ಡಾ. ಕೆ.ಸಿ.ರಾಜು.**

**ಡಾ.ಕೆ.ಸಿ.ರಾಜು**
ಉಪನ್ಯಾಸಕರು
ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಡಾ. ಭೀಮರಾವ್ ರಾಮ್‌ಜೀ ಅಂಬೇಡ್ಕರ್ ಅವರು ಸಮಕಾಲೀನ ಜಗತ್ತಿನ ಶ್ರೇಷ್ಠ ಪುರುಷರಲೊಬ್ಬರು. ಇವರು ಒಬ್ಬ ಸಮಾಜಶಾಸ್ತ್ರಜ್ಞರಾಗಿ, ಹೋರಾಟಗಾರರಾಗಿ, ನ್ಯಾಯಶಾಸ್ತ್ರಜ್ಞರಾಗಿ, ದಮನಿತ ಜನವರ್ಗಗಳ ನೇತಾರರಾಗಿ, ಮಹಾನ್ ಮಾನವತಾವಾದಿಯಾಗಿ, ರಾಜಕೀಯ ಮುತ್ಸದ್ಧಿಯಾಗಿ ಅವರು ಬಿಟ್ಟು ಹೋಗಿರುವ ವೈಚಾರಿಕ ಸಾಹಿತ್ಯ ಮತ್ತು ಪ್ರಜ್ಞೆಯೂ ಇಂದಿಗೂ ಕೂಡ ಅವಿಸ್ಮರಣಿಯ. ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ ಹಾಗೂ ಜಾತಿಯತೆಯ ವಿರುದ್ಧ ಅವರು ನಡೆಸಿದ ಹೋರಾಟ ಅಭೂತಪೂರ್ವವಾದುದು. ಆಧುನಿಕ ಭಾರತದ ಸಾಮಾಜಿಕ ಅಸಮಾನತೆಯ ಕೊಳೆಯನ್ನು ಬೇರು ಸಹಿತ ಕಿತ್ತು ಹಾಕಲು ದುಡಿದವರಲ್ಲಿ ಅಂಬೇಡ್ಕರ್ ಅವರು ಮೊದಲಿಗರು. ಸ್ವತಃ ನೊಂದವರ ನೋವು ನೊಯದವರೆತ್ತ ಬಲ್ಲರು ಎಂಬಂತೆ. ಸ್ವತಃ ನೋವುಂಡವರು. ಹಾಗಾಗಿ ನೊಂದವರ ಧ್ವನಿಗೆ ಗಟ್ಟಿಧ್ವನಿಯಾಗಿ ಭಾರತೀಯ ಸಮಾಜದಲ್ಲಿ ಅಸುಹೊಕ್ಕಾಗಿರುವಂಥ ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಲು ಹೋರಾಡಿದ ಅಪ್ರತಿಮ ಹೋರಾಟಗಾರರು ಬಾಬಾಸಾಹೇಬ್ ಅಂಬೇಡ್ಕರ್.

ಭಾರತದಲ್ಲಿ ಅನಾದಿ ಕಾಲದಿಂದಲೂ ಜಾತಿಹಿಂದೂ ಸಮಾಜವು ಮೌಢ್ಯತ್ಯೆ ಅವೈಜ್ಞಾನಿಕ ಸಂಪ್ರದಾಯ, ಮೂಢನಂಬಿಕೆ ಜಾತಿಯ ಹೆಸರಿನ ಮೇಲೆ ಅಸ್ಪೃಶ್ಯತೆಯನ್ನು ಹುಟ್ಟುಯನ್ನು ಹಾಕಿ ಬಹುಸಂಖ್ಯಾತ ಶೋಷಿತರನ್ನು ಕೇರಿಯಿಂದ ಹೊರದೂಡಿದಲ್ಲದೇ ಅವರನ್ನು ದೈಹಿಕವಾಗಿ, ಮಾನಸಿಕವಾಗಿ ಹೀಗೆ ಹಲವು ರೀತಿಯಲ್ಲಿ ಧಾರುಣವಾಗಿ ಹಿಂಸಿಸುತ್ತಾ ಬಂದಿದ್ದಾರೆ. ಅಕ್ಷರ

ಸಂಸ್ಕೃತಿಯಿಂದ ಅವರನ್ನು ದೂರವಿಡುತ್ತ ಅವರ ಸಂಸ್ಕೃತಿ, ಸಾಹಿತ್ಯ, ನಡೆನುಡಿ, ಆಚಾರ ವಿಚಾರಗಳಿಗೆ ಯಾವುದೇ ಮನ್ನಣೆ ಸಿಗದಹಾಗೆ ನೋಡಿಕೊಂಡಿದ್ದಾರೆ. ಆದ್ದರಿಂದ ಅವರ ಪ್ರತಿಭೆಗೆ ಪೆಟ್ಟು ಬಿದ್ದು ಅವರ ಬದ್ಧತೆ, ಪ್ರಾಮಾಣೀಕತೆ ಹಾಳಾಗುತ್ತಿದೆ. ಈ ನೆಲದ ಮೂಲನಿವಾಸಿ ಜನವರ್ಗಗಳು ಅವರಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಸಾಧ್ಯವಾಗದೆ ಹಾಗೆಯೇ ಉಳಿದಿರುತ್ತದೆ. ಅಂಥ ಕಾಲಸಂದರ್ಭದಲ್ಲಿ ಸಾಮಾಜಿಕ ಸುಧಾರಣಾ ಆಂದೋಲನಗಳು ವಿಶ್ವದಾದ್ಯಂತ ಪ್ರಭಾವ ಬೀರಿರುವುದನ್ನು ಗುರುತಿಸಬಹುದು. ಅಂಥದರಲ್ಲಿ ಭಾರತದ ಅಸ್ಪೃಶ್ಯ ಸಮುದಾಯಗಳ ಮೇಲೆ ಈ ಪರಿಸ್ಥಿತಿ ವಿಶೇಷವಾಗಿಯೇ ಪ್ರಭಾವ ಬೀರಿತ್ತು. ಶತಮಾನಗಳಿಂದ ದಮನಕೊಳಗಾಗಿದ್ದಂಥ ಜನಸಮುದಾಯದಲ್ಲಿ ಜಾಗೃತಿ ಮೂಡಿಸುವ ಅನಿವಾರ್ಯತೆ ಇದ್ದಂಥ ಸಂದರ್ಭದಲ್ಲಿ ಹಲವು ಸಮಾಜ ಪರಿವರ್ತನಕಾರರು ದುಡಿದಿದ್ದಾರೆ. ಅಂಥವರಲ್ಲಿ ಅಂಬೇಡ್ಕರ್ ಅವರು ಭಾರತೀಯ ನೆಲದ ಶೋಷಿತ ಜನವರ್ಗಗಳ ದಮನಿತ ಧ್ವನಿಗೆ ದನಿಯಾಗಿ ಅವರನ್ನು ಶೋಷಣೆಯಿಂದ ಬಿಡುಗಡೆಗೊಳಿಸಲು ಅಂಬೇಡ್ಕರ್ ಅವರು ಹೋರಾಟಗಳನ್ನು ರೂಪಿಸಿರುತ್ತಾರೆ.

ಶೋಷಿತರ ಉದ್ಧಾರದ ಕಾರ್ಯದಲ್ಲಿ ಅಂಬೇಡ್ಕರ್ ಅವರು ಶಿಕ್ಷಣಕ್ಕೆ ವಿಶೇಷವಾದಂಥ ಸ್ಥಾನ ಮತ್ತು ಮಹತ್ವವನ್ನು ನೀಡಿದರು. ಅಂಬೇಡ್ಕರ್ ಅವರ ಪ್ರಕಾರ; **ಸ್ವಾಭಿಮಾನಿಯಾಗಿ ಬದುಕುವುದು ಪ್ರತಿಯೊಬ್ಬನ ಜನ್ಮದತ್ತವಾದ ಹಕ್ಕು**. ಆದರೆ ಅನಕ್ಷರತೆಯು ಅಸ್ಪೃಶ್ಯರ ಶತ್ರುವಾಗಿ ಅವರ ಸ್ವಾಭಿಮಾನವನ್ನೇ ಜಡ್ಡುಗಟ್ಟಿಸಿಬಿಟ್ಟಿದೆ ಎಂಬುದನ್ನು ಅವರು ಮನಗಂಡಿದರು. ಆದ್ದರಿಂದ ಅಂಬೇಡ್ಕರ್ ಅವರು 1923 ರಿಂದ ವಕೀಲ ವೃತ್ತಿ ಅರಂಭಿಸಿದಾಗಲಿಂದಲೂ ಈ ನಿಟ್ಟಿನಲ್ಲಿ ಚಿಂತಿಸತೊಡಗಿದರು. 1924ನೇ ಜುಲೈ 20ರಂದು ಶೋಷಿತ ಜನವರ್ಗದ ಮುಖಂಡರ ಸಭೆಯೊಂದನ್ನು ಕರೆದಿದ್ದು, ಅದು **ಬಹಿಷ್ಕೃತ ಹಿತಕಾರಣಿ ಸಭಾ** ಎಂಬ ಸಂಘಟನೆಗೆ ಜನ್ಮ ನೀಡಿತು. ಈ ಸಭೆಗೆ ಹೀರಲಾಲ್ ಸೆಟನ್‌ವಾಡ ಅಧ್ಯಕ್ಷರಾದರೆ, ಡಾ. ಬಿ. ಆರ್. ಅಂಬೇಡ್ಕರ್ ಅವರು ಕಾರ್ಯಾಧ್ಯಕ್ಷರಾಗಿ ಮತ್ತು ಸಾವತ್ಕರ್ ಕಾರ್ಯದರ್ಶಿಯಾಗಿ, ಜಯಪ್ರಕಾಶ್ ನಾರಾಯಣ, ಜಿ.ಕೆ.ನಾರಿಮನ್, ಡಾ. ಆರ್.ಪಿ.ಪರಂಜಾಪೆ, ಡಾ. ವಿ.ವಿ.ಚವ್ಹಾಣ, ರುಸ್ತುಮ್‌ಜಿ ಜೀನ್‌ವಾಲ್, ಬಿ.ಜಿ.ಖೇರ್ ಅವರು ಉಪಾಧ್ಯಕ್ಷರಾಗಿ ಎಸ್.ಟಿ. ಜಾಧವ್ ಅವರು ಖಜಾಂಚಿಯಾಗಿ ಆಯ್ಕೆಗೊಂಡು ಕಾರ್ಯನಿರ್ವಹಿಸಿದ್ದರು.

**ಬಹಿಷ್ಕೃತ ಹಿತಕಾರಣಿ ಸಭಾದ ಉದ್ದೇಶಗಳು**

- ದಲಿತ ವರ್ಗಗಳ ಶಿಕ್ಷಣ ಮಟ್ಟವನ್ನು ಉತ್ತೇಜಿಸಲು ವಸತಿ ನಿಲಯಗಳ ಸ್ಥಾಪನೆ ಮತ್ತು ಇತರ ಅವಶ್ಯಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

- ❖ ದಲಿತರ ಸಾಂಸ್ಕೃತಿಕ ಮಟ್ಟ ಸುಧಾರಿಸಲು ಗ್ರಂಥಾಲಯ, ಸಮುದಾಯ ಭವನ ಮತ್ತು ಅಧ್ಯಯನ ವೃತ್ತ ತೆರೆಯುವುದು.

- ❖ ದಲಿತ ವರ್ಗಗಳ ಆರ್ಥಿಕ ಪ್ರಗತಿ ಮತ್ತು ಇತರೆ ಯಾವುದೇ ರೀತಿಯ ಕೊರತೆಗಳ ನಿವಾರಣೆಗಾಗಿ ಸಂಬಂಧಪಟ್ಟ ಅಧಿಕಾರಿಗಳ ಮಾರ್ಗದರ್ಶನ ನೀಡುವುದು.

- ❖ ಬಹಿಷ್ಕೃತ ಹಿತಕಾರಣಿ ಸಭಾದ ಮೂಲಕ ದಲಿತ ವಿದ್ಯಾರ್ಥಿಗಳಗಾಗಿ ಪ್ರೌಢಶಾಲೆ ಮತ್ತು ವಸತಿ ನಿಲಯಗಳನ್ನು ತೆರೆದರು. **ಓದಿ ಓದಿ ಹೇಳು ಇತರರಿಂದ ತಿಳಿದುಕೊ ಅರ್ಥೈಸಿಕೊ ಮತ್ತು ಇತರರಿಗೆ ಅರ್ಥವನ್ನು ವಿವರಿಸಿ** ಎಂಬ ಧ್ಯೇಯವನ್ನು ಹೊಂದಿದ **ಭಾರತೀಯ ಬಹಿಷ್ಕೃತ ಸಮಾಜ ಸೇವಾ ಸಂಘ** ಎಂಬ ಸಾಮಾಜಿಕ ಸಂಸ್ಥೆಯೊಂದನ್ನು ತೆರೆದು ಜ್ಞಾನ ಪ್ರಸಾರಕ್ಕಾಗಿಯೇ ಅದು ತನ್ನ ಕಾರ್ಯಕ್ರಮವನ್ನು ಮುಡಿಪಾಗಿಡುವಂತೆ ಮಾಡಿದರು.

- ❖ ಸಂಜೆ ಶಾಲೆ ತೆರೆಯುವುದು, ಬೇರೆ ಬೇರೆ ಇಲಾಖೆಗಳ ಉದ್ಯೋಗಿಗಳಗೆ ಅಸ್ಪೃಶ್ಯರನ್ನು ನೇಮಕ ಮಾಡಿಕೊಳ್ಳಲು ಸರ್ಕಾರದ ಗಮನಕ್ಕೆ ತರುವುದು.

- ❖ ವಂಶಪಾರಂಪರ್ಯ ಕೆಲಸಗಳಗೆ ಪರ್ಯಾಯ ಕೆಲಸಗಳಗೆ ತರಬೇತಿ ನೀಡುವ ಮೂಲಕ ಅಸ್ಪೃಶ್ಯರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲರನ್ನಾಗಿಸುವುದು ಮುಂತಾದ ಉದ್ದೇಶಗಳನ್ನು ಹೊಂದಿತ್ತು. ಹೀಗೆ ಹಲವಾರು ದಲಿತ ಪರವಾದ ಕೆಲಸವನ್ನು ಈ ಸಂಸ್ಥೆಯು ಮಾಡುತ್ತಾ ದೇಶದೆಲ್ಲೆಡೆ ವ್ಯಾಪಿಸಿತ್ತು.

ಈ ಸಂಸ್ಥೆಯು ದಿನಾಂಕ 04-01-1925ರಂದು ಸೊಲ್ಲಾಪುರದಲ್ಲಿ ನಿಮ್ನವರ್ಗಗಳ ಬಾಲಕ ವಿದ್ಯಾರ್ಥಿ ನಿಲಯವನ್ನು ತೆರೆಯಿತು. ಅದಕ್ಕೆ ಪುರಸಭೆ ಅನುದಾನ ನೀಡಿತು. ಈ ವೇಳೆಗಾಗಲೇ ಅಂಬೇಡ್ಕರ್ ಅವರ ವ್ಯಕ್ತಿತ್ವವೂ ವೃದ್ಧಿಸತೊಡಗಿತು. ಅಂಬೇಡ್ಕರ್ ಅವರ ಭಾಷಣವನ್ನು ಕೇಳಲು ಹಳ್ಳಿ ಹಳ್ಳಿಗಳಂದ ಜನರು ದಂಡು ದಂಡಾಗಿ ಹರಿದು ಬರುತ್ತಿದ್ದರು. ಇದೇ ವರ್ಷ ಕೇರಳದಲ್ಲಿ ರೋಚಕ ವಿಷಯವೊಂದು ಹರಡಿತು. ಕೇರಳದ ವೈಕಂನಲ್ಲಿ ವೈಕಂ ದೇವಸ್ಥಾನದ ನಿಷೇಧಿಸಲ್ಪಟ್ಟ ರಸ್ತೆಯನ್ನು ಬಳಸಲು ಪೆರಿಯಾರ್ ರಾಮಸ್ವಾಮಿ ನೇತೃತ್ವದ ಹೋರಾಟದ ಫಲದಿಂದ ಸಾಧ್ಯವಾಯಿತು. ಮಾರ್ಚ್ 1926ರಲ್ಲಿ ಮದಾರಾಸಿನಲ್ಲಿ ಮುರುಗೇಶ್ ಎಂಬ ದಲಿತ ಮಂದಿರ ಪ್ರವೇಶ ಮಾಡಿದ್ದ. ದೇವರಿಗೆ ಮೈಲಿಗೆಯಾಯಿತೆಂದು ಜಾತಿಹಿಂದೂಗಳು ಮುರುಗೇಶನನ್ನು ಕಠೋರ ಶಿಕ್ಷೆ ನೀಡಿದರು. ಇಂಥ ಹಲವಾರು ವಿಷಯಗಳ ಕಡೆ ಅಂಬೇಡ್ಕರ್ ಅವರು ಈ

ಕಾಲಸಂದರ್ಭದಲ್ಲಿ ತಮ್ಮ ಗಮನ ಹರಿಸಿದರು. ಈ ತೆರೆನಾದ ಘಟನೆಯಿಂದ ಅಂಬೇಡ್ಕರ್ ಅವರು ಗಾಸಿಯಾದರು. ಅನಂತರ ಅಸ್ಪೃಶ್ಯತೆಯ ವಿರುದ್ಧ ಬಹುದೊಡ್ಡ ಹೋರಾಟವನ್ನು ರೂಪಿಸಿ ಅದನ್ನು ಮುಂದುವರೆಸುವ ಪಣತೊಟ್ಟರು.

ಭಾರತೀಯ ನೆಲದ ಮೂಲನಿವಾಸಿ ಸಮುದಾಯವಾಗಿರುವಂಥ ಅಸ್ಪೃಶ್ಯರು ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದು, ಅವರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರದೇಶಾವಕಾಶವಿರಲಿಲ್ಲ. ಮನುಷ್ಯನಿಗೆ ಬದುಕಲು ಮೂಲಭೂತವಾಗಿ ಬೇಕಾಗಿರುವಂಥ ಕುಡಿಯಲು ಶುದ್ಧನೀರು ಬೇಕು. ಅದನ್ನು ಕೂಡ ಅಸ್ಪೃಶ್ಯರಿಗೆ ನಿಷೇಧಿಸಲಾಗಿದೆ. ಇದನ್ನು ಬದಲಿಸುವ ಉದ್ದೇಶದಿಂದ 1926ರ ಏಪ್ರಿಲ್ 19 ಮತ್ತು 20 ರಂದು ಅಸ್ಪೃಶ್ಯರನ್ನು ಸಂಘಟಿಸಿ ಮಹಾಡ್ ನಗರದಲ್ಲಿ ಬೃಹತ್ ಸಮಾವೇಶವೊಂದನ್ನು ನಡೆಸಿದರು. ಭೂಮಿಯ ಮೇಲೆ ಸಮಸ್ತ ಜೀವರಾಶಿಗೂ, ನೀರಿಗೂ ಹುಟ್ಟು ಮತ್ತು ಸಾವುಗಳಷ್ಟು ಖಚಿತ ಮತ್ತು ನಿರ್ಣಾಯಕ ಸಂಬಂಧವೆ ಇದೆ. ಯಾವ ಪ್ರಾಣಿಯೆ ಆಗಲಿ ಪಕ್ಷಿಯೇ ಆಗಲಿ ನೀರು ಕುಡಿಯಲು ತಡೆಗಟ್ಟುವ ಅಧಿಕಾರ ಯಾರಿಗೂ ಇಲ್ಲವೆಂದು ತಮ್ಮ ಚಿಕ್ಕಂದಿನ ಅನುಭವವನ್ನು ನಿವಾರಿಸಿದರು. ದಲಿತರಾದ ನಮ್ಮ ನಡೆ ನುಡಿ ಬದಲಾವಣೆಗೊಳ್ಳಬೇಕು. ನಮ್ಮ ಆಲೋಚನೆಗಳನ್ನು ಜೀವಂತಗೊಳಿಸಬೇಕು. ನಮ್ಮಗಿಂತ ನಮ್ಮ ಮಕ್ಕಳು ಉತ್ತಮ ರೀತಿಯಲ್ಲಿ ಬಾಳಬೇಕೆಂದು ಸಂಕಲ್ಪ ಮಾಡಬೇಕೆಂದು ಈ ಶೋಷಿತರ ವಿಮೋಚನಾ ಮಹತ್ವದ ಸಮಾವೇಶದಲ್ಲಿ ದಲಿತರಿಗೆ ಕರೆ ನೀಡಿದರು.

ಈ ಸಮ್ಮೇಳನದ ಮೂಲಕ ಅಸಮಾನತೆಯ ಜಾತಿಹಿಂದೂಗಳಿಗೆ ಮತ್ತು ಸರ್ಕಾರಕ್ಕೆ ಮಾಡಿದ ಮನವಿಯೆಂದರೆ; ಶೋಷಿತ ಸಮುದಾಯದವರಿಗೆ ಪೌರಹಕ್ಕುಗಳು ಮತ್ತು ಸರ್ಕಾರಿ ನೌಕರುಗಳು ದೊರೆಯಲು ಸಹಾಯ ಮಾಡುವಂತೆ, ಅವರ ಮಕ್ಕಳಿಗೆ ಉಚಿತ ಆಹಾರವನ್ನು ಒದಗಿಸುವಂತೆ ತಾವೇ ಸತ್ತ ಪ್ರಾಣಿಗಳನ್ನು ಹೂಳುವಂತೆ ಸಮ್ಮೇಳನ ನಿರ್ಣಯದ ಮೂಲಕ ಜಾತಿಹಿಂದೂಗಳಿಗೆ ಮನವಿ ಮಾಡಿತು. ಹಾಗೆಯೇ ಪಾನ ನಿರೋಧವನ್ನು ಜಾರಿಗೆ ತರುವಂತೆ ಹಾಗೂ ಸರ್ಕಾರವೇ ಉಚಿತ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತರುವುದು. ನಿಮ್ನವರ್ಗದ ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಾಯಿತು.

ಅಸ್ಪೃಶ್ಯರಿಂದ ಮಹದ್ ನಗರದಲ್ಲಿರುವಂಥ ಚೌಡರ್ ಕೆರೆ ನೀರನ್ನು ಸಂಕೇತಿಕವಾಗಿ ಮುಟ್ಟಬೇಕೆಂದು ಇದರಲ್ಲಿ ಕೆಲವು ಸವರ್ಣಿಯರು ಮತ್ತು ಅಲ್ಲಿನ ಮುನ್ಸಿಪಾಲಿಕೆಯು ಬೆಂಬಲ ಸೂಚಿಸಿತು. ಚೌಡರ್ ಕೆರೆ ನೀರನ್ನು ಮುಟ್ಟುವ ಹಕ್ಕು ಅಸ್ಪೃಶ್ಯರಿಗಿದೆ ಎಂದು ಮೂರು ವರ್ಷಗಳ ಹಿಂದೆ ಮಹಾಡ್ ಪುರಸಭೆ ಆದೇಶವೊಂದನ್ನು ಹೊರಡಿಸಿತು. ಅದರನ್ವಯ ಸಮಾವೇಶದ ಸದಸ್ಯರು ಚೌಡರ್ ಕೆರೆಯತ್ತ ಸಾಗಿರದು.

ಅದೊಂದು ಮರೆಯಲಾಗದ ಅದ್ಭುತ ಸನ್ನಿವೇಶವಾಗಿತು. ಅಂಬೇಡ್ಕರ್ ಅವರ ದಿಟ್ಟ ನಿಲುವು ಅವರ ವೈಜ್ಞಾನಿಕ ಚಿಂತನೆಯಿಂದಾಗಿ ಇದು ಸಾಧ್ಯವಾಯಿತು. ಇದು ಅಸ್ಪೃಶ್ಯರ ಸ್ವಾಭಿಮಾನದ ಬದುಕಿನ ಸಂಕೇತವಾಗಿದರು. ಜನರಲ್ಲಿ ಉತ್ಸಾಹ ಉಲ್ಲಾಸ ಹರ್ಷೋದ್ಗಾರ ಮುಗಿಲು ಮುಟ್ಟಿತು. ಸುಮಾರು ಹತ್ತು ಸಾವಿರ ಜನರು ಕೆರೆಯ ಸುತ್ತ ನಿಂತಿದ್ದರು. ಸಾವಿರಾರು ವರ್ಷಗಳ ಅವಮಾನ ತಡೆದು ನಿಂತ ಜನಸಮುದಾಯ ಈ ನೀರು ಮುಟ್ಟುವುದು ನಮ್ಮ ಹಕ್ಕು ಎಂಬುದನ್ನು ಸಾಬೀತು ಪಡಿಸಿದರು. ಮೊದಲು ಅಂಬೇಡ್ಕರ್ ಅವರು ನೀರನ್ನು ಸ್ಪರ್ಶಿಸಿದರೆ, ಅನಂತರ ನೆರೆದಿದ್ದಂಥ ಎಲ್ಲರೂ ಕೆರೆಯ ನೀರನ್ನು ಮುಟ್ಟಿದರು. ಚೌಡರ್ ಕೆರೆಯ ಹೋರಾಟ ಅಂದಿನ 6 ಕೋಟಿ ಅಸ್ಪೃಶ್ಯರ ಬದುಕುನಲ್ಲಿ ಒಂದು ಮಹತ್ವದ ಆಶಾಭಾವನೆ ಬಿತ್ತಿದ ಸಂದರ್ಭವೇ ಆಗಿತ್ತು. ಈ ಸಂದರ್ಭದಲ್ಲಿಯೇ ಮಹಾದ್ ನಗರದಲ್ಲಿರುವ ವೀರೇಶ್ವರ ದೇವಸ್ಥಾನವನ್ನು ಅಸ್ಪೃಶ್ಯರು ಪ್ರವೇಶ ಮಾಡಿದರು ಎಂದು ಗಾಳಿ ಸುದ್ಧಿಯೂ ಅಲ್ಲಿನ ಸಂಪ್ರದಾಯವಾದಿ ಮನಸ್ಸಿನ ಜಾತಿಹಿಂದೂಗಳನ್ನು ಕೆರಳಿಸಿತು. ಯಾವುದೇ ಹಿಂದೆ ಮುಂದೆ ನೋಡದೆ ಈ ಸಂಪ್ರದಾಯ ನಿಷ್ಠರು ಕೈಗೆ ಸಿಕ್ಕ ದೊಣ್ಣೆ, ಕಲ್ಲು, ಚಾಕು, ಚೂರಿ ಹಿಡಿದು ಬೀದಿಗಿಳಿದು ತಮ್ಮ ಆರಾಧ್ಯ ದೇವರಿಗೆ ಮೈಲಿಗೆಯಾಗಿದೆ ಎಂದು ಸಮಾವೇಶಕ್ಕೆ ಆಗಮಿಸಿದ್ದವರ ಮೇಲೆ ಮಾರಾಣಾಂತಿಕ ಹಲ್ಲೆಯನ್ನು ಕೂಡ ನಡೆಸಿದರು. ಆದರೆ, ಅಂಬೇಡ್ಕರ್ ಅವರ ಸಮಯ ಪ್ರಜ್ಞೆಯಿಂದ ಭಾರಿ ಅನಾಹುತವೊಂದು ತಪ್ಪಿತು. ಕೆಲವೇ ದಿನಗಳಲ್ಲಿ ಈ ಸಂಪ್ರದಾಯ ನಿಷಠರು ಚೌಡರ್ ಕೆರೆ ಖಾಸಗಿ ವ್ಯಕ್ತಿಯದೆಂದು ಕೋರ್ಟ್‌ನಲ್ಲಿ ದಾವೆ ಹೂಡಿದರು. ಕೆರೆಯನ್ನು ಅಸ್ಪೃಶ್ಯರು ಮುಟ್ಟಿದ್ದಾರೆ. ಕೆರೆಗೆ ಮೈಲಿಗೆಯಾಗಿದೆ ಎಂದು ತಿಳಿದು ಗೋಮೂತ್ರ ಮತ್ತು ಸಗಣಿಯಲ್ಲಿ ಕೆರೆಯನ್ನು ಶುದ್ಧೀಕರಣ ಮಾಡಿದರು. ಇದು ಇವರ ಅಜ್ಞಾನಕ್ಕೆ ಹಿಡಿದ ಕನ್ನಡಿಯೇ ಆಗಿರುತ್ತದೆ.

ಅಂಬೇಡ್ಕರ್ ಅವರು ದಿನಾಂಕ 25-12-1927ರಂದು ತಮ್ಮ ಸ್ವಯಂ ಸೇವಕ ತಂಡದೊಂದಿಗೆ ದಾಸ್‌ಗಾಂವ್‌ನಲ್ಲಿ ಅಸ್ಪೃಶ್ಯರ ಸಮಾವೇಶದಲ್ಲಿ ಭಾಗವಹಿಸಿ; **ಚೌಡರ್ ಕೆರೆಯ ನೀರು ಕುಡಿಯದಿದ್ದರೆ ನಾವು ಸಾಯುವುದಿಲ್ಲ ನಾವು ಮಾನವರು ಈ ಕೆರೆಯ ನೀರಿಗೆ ನಮಗೂ ಹಕ್ಕಿದೆ ಎಂಬುದನ್ನು ಸಾಧಿಸುವುದು ಈ ಚಳವಳಿಯ ಉದ್ದೇಶ**. **ಸಮಾನತೆ, ನಿರ್ಜಾತಿಯತೆಯ ಆಧಾರದ ಮೇಲೆ ಜಾತಿಹಿಂದೂ ಸಮಾಜವನ್ನು ಪುನರ್ ವ್ಯವಸ್ಥೆಗೊಳಿಸಿದರೆ ಮಾತ್ರ, ಈ ನಾಡಿನ ಅಭಿವೃದ್ಧಿ ಸಾಧ್ಯವಾಗುತ್ತದೆ**. ಅಸ್ಪೃಶ್ಯರನ್ನು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ದಾಸ್ಯಕೀಡು ಮಾಡಿದ 'ಮನುಸ್ಮೃತಿಯನ್ನು ಅಸ್ಪೃಶ್ಯರು ತಮ್ಮ ಆಕ್ರೋಶದ ಪ್ರತೀರವೆಂಬಂತೆ ಸಾರ್ವಜನಿಕವಾಗಿ ತೀಮಾನಿಸಲಾಯಿತು. ಅಂತೆಯೆ ಆ ದಿನ ರಾತ್ರಿ 9 ಗಂಟೆಗೆ ವೇದಿಕೆಯ ಮೇಲೆ ಈ ಗ್ರಂಥವನ್ನಿಟ್ಟು ಅಗ್ನಿ ಸ್ಪರ್ಶ ಮಾಡಲಾಯಿತು. ಇಂಥ ಮಹತ್ವದ ಕಾರ್ಯವನ್ನು ಸಹಸ್ರಬುದ್ಧೆ, ಪಿ.ಎನ್.ರಾಜ್‌ಬೋಜ್ ಮತ್ತು ಗಂಗೂಬಾಯಿ ಸವಂತೆ ಎಂಬುವರು ನೇರವೇರಿಸಿದವರು. ಈ

ಸುದ್ಧಿಯನ್ನು ತಿಳಿದಂಥ ಅನೇಕ ಮಠಾಧೀಶರು ತತ್ತರಿಸಿ ಹೋಗಿದ್ದರು. ಮನುಸ್ಮೃತಿಯನ್ನು ಸುಡುವ ಮೂಲಕ ಅಂಬೇಡ್ಕರ್ ಅವರು ಮೇಲ್ಜಾತಿಗಳ ಧಾರ್ಮಿಕ ಶ್ರೇಷ್ಠತೆಯ ನಂಬಿಕೆಯನ್ನು ಪ್ರಶ್ನಿಸ ಬಯಸಿದರು. ಮನುಸ್ಮೃತಿಯನ್ನು ಸುಡುವ ಕಾರ್ಯಕ್ರಮವು ಸಾವಿರಾರು ವರ್ಷಗಳಿಂದ ಸಂಗ್ರಹವಾಗಿರುವ ಘೋರ ಸಂಕಟವನ್ನು ಪ್ರದರ್ಶಿಸಲು ಮತ್ತು ಜಗತ್ತಿನ ಗಮನ ಸೆಳೆಯಲು ಅದೊಂದು ಸಾಧನವಾಯಿತು. ಜನ ಜಡವಾದಾಗ ಇಂಥ ಅಗತ್ಯ ಕಾರ್ಯಕ್ರಮ ಅಗತ್ಯ ಎಂದು ಅಂದೇ ಅಂಬೇಡ್ಕರ್ ಅವರು ಆ ಸಭೆಯಲ್ಲಿ ಗಟ್ಟಿಧ್ವನಿಯಿಂದಲೇ ಸಾರಿದರು.

ಅಸ್ಪೃಶ್ಯರಿಗೆ ದೇವಾಲಯದ ಪ್ರವೇಶವನ್ನು ಧಾರ್ಮಿಕ ಮತ್ತು ಸಾಂಪ್ರದಾಯಿಕವಾಗಿ ಪ್ರತಿಬಂಧಿಸಲಾಗಿತು. ಇಂಥ ದೈವ ಕೇಂದ್ರತವಾದ ನಂಬಿಕೆಯ ಸಂಪ್ರದಾಯ, ಮೂಢನಂಬಿಕೆಯಂಥ ಆಚರಣೆಯು ಸಮಾಜದಲ್ಲಿ ಬೇರೂರಿದೆ. ಹಾಗಾಗಿ ಇಂಥ ಅವೈಜ್ಞಾನಿಕ ಅನಿಷ್ಠ ಪದ್ಧತಿ ಹೋಗಲಾಡಿಸಲು ದೇವಾಲಯದ ಪ್ರವೇಶದ ಚಳವಳಿಯನ್ನು ರೂಪಿಸಿದರು. ಜಾತಿಹಿಂದೂಗಳ ಅಸ್ಪೃಶ್ಯರನ್ನು ಹಿಂದೂಗಳೆಂದು ಕರೆದರು. ತಮ್ಮ ದೇವಾಲಯಗಳಿಗೆ ಏಕೆ ಅಸ್ಪೃಶ್ಯರ ಪ್ರವೇಶ ನಿಷೇಧಿಸಿರುವುದನ್ನು ಪ್ರಶ್ನಿಸಿದರು. ಅಸ್ಪೃಶ್ಯರ ಪ್ರವೇಶದಿಂದ ದೇವಾಲಯವೂ ಅಪವಿತ್ರಗೊಳ್ಳುತ್ತದೆ ಎಂಬುದು ಭಾರತೀಯ ಅಸಮಾನ ರೋಗಗ್ರಸ್ಥ ಸಮಾಜದ ನಂಬಿಕೆಯಾಗಿದೆ. ಈ ನಂಬಿಕೆ ಹೋಗಲಾಡಿಸಲು 1930ರಲ್ಲಿ ನಾಸಿಕ್‌ನ ಕಾಳರಾಮ ದೇವಸ್ಥಾನಕ್ಕೆ ಅಸ್ಪೃಶ್ಯರಿಗೆ ಪ್ರವೇಶದಂಥ ಚಳವಳಿಯನ್ನು ಆರಂಭಿಸಿದರು. ಅಂಬೇಡ್ಕರ್ ಅವರು ಅಂದು ಈ ದೇವಾಸ್ಥಾನದ ಪ್ರವೇಶದ ಬಗೆಗೆ ಜಾತಿಹಿಂದೂಗಳು ಮತ್ತು ಅಸ್ಪೃಶ್ಯರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನವನ್ನು ಕೂಡ ಮಾಡಿದರು. ಮೊದಲಿಗೆ ಈ ಜಾತಿನಿಷ್ಠರು ಒಪ್ಪಿಕೊಂಡರು ಅನಂತರ ಚಳವಳಿಗಾರರು ಹೋದಾಗ ದೇವಾಲಯದ ಮುಖ್ಯದ್ವಾರಕ್ಕೆ ಬೀಗ ಹಾಕಲಾಗಿತ್ತು. ಈ ಘಟನೆಯಿಂದ ಅಂಬೇಡ್ಕರ್ ಅವರು ತುಂಬಾ ಬೇಸರಗೊಂಡಿದ್ದರು. ಈ ಮತಮೌಢ್ಯ ಮನಸ್ಸಿನವರು ಅರ್ಥವಿಲ್ಲದ ಆಚರಣೆಗಳಿಂದ ಬದಲಾಗಬೇಕು ಎಂದು ಹಲವಾರು ತಿಂಗಳುಗಳ ಕಾಲ ಸತ್ಯಾಗ್ರಹ ನಡೆಸಿದರೂ ಕೂಡ ಇವರ ಮನಸ್ಸು ಬದಲಾಗಲಿಲ್ಲ. ಆದರೆ, ಅಂಬೇಡ್ಕರ್ ಅವರಿಗೆ ವಾಸ್ತವವಾಗಿ ದೇವರು ದೇವಸ್ಥಾನದ ಬಗೆಗೆ ನಂಬಿಕೆ ಇಲ್ಲದರಿಂದ ಕಾಲಕ್ರಮೇಣ ಈ ಬಗೆಯ ಸಾಂಕೇತಿಕ ದೇವಾಲಯ ಚಳವಳಿ ನಿರಾರ್ಥಕವೇ ಆಗಿರುತ್ತದೆ. ಹಾಗಾಗಿ ಆ ಚಳವಳಿಯನ್ನು ಅರ್ಧಕ್ಕೆ ಕೈಬಿಟ್ಟು ಅಸ್ಪೃಶ್ಯರು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ತಮ್ಮ ತಮ್ಮ ಹಕ್ಕುಗಳನ್ನು ಪಡೆಯುವಲ್ಲಿ ಅವಿರತವಾಗಿ ಪ್ರಯತ್ನಿಸಬೇಕೆಂದು ಕರೆ ನೀಡಿದರು. ಪ್ರಸ್ತುತದಲ್ಲಿ ಹಿಂದಿಗಿಂತಲೂ ಹೆಚ್ಚು ಹೆಚ್ಚು ಸಂಘಟನೆಗಳು ಮತ್ತು ಚಳುವಳಿಗೆ ನಡೆಯುತ್ತಲಿವೆ. ಆದರೆ, ಅವುಗಳ ಮೂಲ ಆಶಯವೂ ಎಲ್ಲೋ ಒಂದು ಕಡೆ ಬದಲಾದಂತೆ ಭಾಸವಾಗುತ್ತಿದೆ. ಪ್ರತಿಯೊಂದು ಜಾತಿ, ಉಪಜಾತಿ, ಊರು ಊರಿಗೆ ಜಾತಿ ಹೆಸರಿನ ಸಂಘಟನೆಗಳು

ಕಾರ್ಯಪ್ರವೃತ್ತವಾಗಿದೆ. ಎಲ್ಲಾ ಸಂಘಟನೆ ಸಮುದಾಯದ ಹಿತಕಾಯುವುದರಿಂದ ವೈಯಕ್ತಿಕ ಹಿತಾಸಕ್ತಿಗೆ ಪ್ರಾಮುಖ್ಯತೆ ಕೊಟ್ಟಿರುವಾಗೆ ಕಾಣುತ್ತಿದೆ. ಪ್ರತಿ ಜಾತಿ ಉಪಜಾತಿಗಳು ಅವರವರ ಸಮುದಾಯದೊಳಗೆ ಸಂಘಟನೆ ಮಾಡಿಕೊಳ್ಳುತ್ತಿದೆ. ಇವುಗಳನ್ನು ಮೀರಿದಂಥ ಹಿಂದುಳಿದವರು, ಅಲ್ಪಸಂಖ್ಯಾತರು, ನೊಂದವರು, ಮಹಿಳೆಯರನ್ನು ಒಟ್ಟಿಗೆ ಸೇರಿಸಿಕೊಂಡು ಸಂಘಟಿಸುವ ಅಗತ್ಯ ಅನಿವಾರ್ಯವಾಗಿದೆ. ಭಾರತದಾದ್ಯಂತ ಛಿದ್ರ ಛಿದ್ರವಾಗಿರುವ ಸಾಮಾಜಿಕ ಪರಿವರ್ತನೆಯ ಸಂಘಟನೆಗಳು ಅದರ ನಾಯಕರುಗಳು ತಮ್ಮ ತಮ್ಮ ಸ್ವಪ್ರತಿಷ್ಠೆಗಳನ್ನು ಬಿಟ್ಟು ಸಂಘಟಿತರಾಗಿ ಒಂದುಗೂಡಿ ಮೂಲ ಆಶಯಗಳಿಗೆ ಧಕ್ಕೆ ಆಗದ ಹಾಗೆ ಹೋರಾಟ ನಡೆಸಿದರೆ, ಗುರಿ ಮುಟ್ಟಲು ಸಾಧ್ಯವಾಗುತ್ತದೆ. ಆವಾಗ ಮಾತ್ರವೇ ಅಂಬೇಡ್ಕರ್ ಅವರ ಆಶಯ ಮತ್ತು ಕನಸು ನನಸಾಗುತ್ತದೆ. ಇಲ್ಲವಾದಲ್ಲಿ ಅಸ್ಪೃಶ್ಯತಾಚರಣೆಯ ಸಮಸ್ಯೆ ಜಟಿಲವಾಗಿ ಶೋಷಿತ ಸಮುದಾಯದ ಮಹಿಳೆಯರ ಮತ್ತು ಹಿಂದುಳಿದವರ ಏಳ್ಗೆ ಅಸಾಧ್ಯ. ಆ ನಿಟ್ಟಿನಲ್ಲಿ ಎಲ್ಲಾ ಸಂಘಟನೆಗಳು ಮತ್ತು ಚಳವಳಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕಾಗಿದೆ.

ಶೋಷಿತರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಅಪಮಾನದ ಬದುಕು ಸಾಗಿಸುತ್ತಿದ್ದಾರೆಂದು ಅಂಬೇಡ್ಕರ್ ಅವರು ಅವರಿಗೆ ಸ್ವಾಭಿಮಾನದ ಜೀವನ ನಡೆಸಲು ಕರೆ ನೀಡಿದರು. ಪ್ರತಿಯೊಬ್ಬ ಅಸ್ಪೃಶ್ಯರು ಶಿಕ್ಷಣ ಕುರಿತು ಸಂಘಟಿತರಾಗಿ ಹೋರಾಡುವ ಮೂಲಕ ತಮ್ಮ ಹಕ್ಕುಗಳನ್ನು ಸಂವಿಧಾನದತ್ತವಾಗಿ ಪಡೆದುಕೊಳ್ಳಲು ಹೋರಾಡಲು ಕಾರ್ಯಪ್ರವೃತ್ತರಾಗಬೇಕು ಎಂದು ಮಾರ್ಗದರ್ಶನ ನೀಡಿದರು. ಶೋಷಿತರ ಸ್ವಾಭಿಮಾನದ ಬದುಕುವುದನ್ನು ಕುರಿತು ಪ್ರಪಂಚದಲ್ಲಿ ಏನನ್ನು ಸಾಧಿಸಬೇಕೆಂಬ ಅಭಿಲಾಷೆ ಹೊಂದಿ, ಹೀಗೆ ಮಾಡಿದರೆ ನಿಮ್ಮ ಶ್ರಮಕ್ಕೆ ಪ್ರತಿಫಲ ದೊರೆಯುತ್ತದೆ. ಈ ಪ್ರಪಂಚದಲ್ಲಿ ನಾನು ಮೇಲೆ ಬರಲು ಸಾಧ್ಯವಿಲ್ಲವೆಂಬುವುದನ್ನು ಮೊದಲು ಮೊದಲು ಬಿಟ್ಟು ಎಲ್ಲಾದನ್ನು ಮುನ್ನಾಗಿ ತಾವು ಬೆಳವಣಿಗೆ ಹೊಂದಲು ಸಾಧ್ಯ ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಕಾರ್ಯಪ್ರವೃತ್ತರಾದರೆ ಮಾತ್ರ ಶೋಷಿತರು ಮತ್ತು ಭಾರತ ದೇಶವೂ ಕೂಡ ಬಲಿಷ್ಠ ರಾಷ್ಟ್ರಗಳ ಸಾಲಿನಲ್ಲಿ ಅಭಿವೃದ್ಧಿಯನ್ನು ಹೊಂದಲು ಸಾಧ್ಯ.

**ಗ್ರಂಥಸೂಚಿ**

1. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, 2015
2. ಜವರಯ್ಯ.ಮ.ನ, ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, 1996
3. ದತ್ತಾತ್ರಯ ಇಕ್ಕಳಕಿ, (ಸಂ) ಅಂಬೇಡ್ಕರ್ ಚಿಂತನೆ, 2005
4. Bhagawan Das (ed), Thus Spoke Ambedkar, 1968
5. Kshirasagara, , Dalit Movement in India and Its leaders 1857-1956, 1994
6. Ramadas V. AMBEDKAR MOVEMENT: EVOLUTION OF AN IDEOLOGY, 2002